ಜಾಗ ಮಾಡಿಕೊಂಡು ಸಣ್ಣದೊಂದು ಗಾಳಿಯು ಬಸ್ಸಿನೊಳಕ್ಕೆ ನುಗ್ಗಿ, ನನ್ನನ್ನೂ ಚುಂಬಿಸಿದಾಗ, ಮೈಮನಗಳೆರಡೂ ಹಾಯೆಂದು ಸಂಭ್ರಮಿಸಿದವೆಂದೇ ಹೇಳಬೇಕು. ಹೀಗೆ ನಾನಾ ಮನಃಸ್ಥಿತಿಯಲ್ಲಿ ನಾವೆಲ್ಲ ಇರುವಾಗ ಕಂಡಕ್ಟರ್ ಬಂದು, ಇನ್ನೂ ಬಾಗಿಲಲ್ಲೇ ನಿಂತಿರುವವರನ್ನು ಇನ್ನಷ್ಟು ಒಳಕ್ಕೆ ದಬ್ಬಿ, ರೈಟ್ ಹೇಳಿದಾಗ, ಬಸ್ಸು ಹೆಚ್ಚು ತಂಟೆ ಮಾಡದೆ ಅಲ್ಲಿಂದ ಸರಾಗವಾಗಿ ಚಲಿಸಿ, ಮೈಸೂರಿನತ್ತ ಮುಖ ಮಾಡಿತು. ಆಗಲಾಗ, ಗರಿಷ್ಠ ಆರು ಜನರು ಕೂರುವ ಬಸ್ಸಿನ ಕೊನೆಯ ಸೀಟಿನಲ್ಲಿ ಕನಿಷ್ಠ ಎಂಟು–ಹತ್ತು ಜನರು ಒಬ್ಬರಿಗೊಬ್ಬರು ಒತ್ತರಿಸಿಕೊಂಡು, ಕಿಕ್ಕಿರಿದು ಕೂತಿದ್ದ ಪ್ರಯಾಣಿಕರು ಮಾತನಾಡಲು ಪ್ರಾರಂಭಿಸಿದಾಗ, ಆ ಮಾತುಗಳು ಬಂದು ನನ್ನ ಕಿವಿಯಲ್ಲಿ ಶೇಖರವಾಗತೊಡಗಿದವು. 'ಯಾರ', 'ಯಾನ', 'ಯಾವ್ದ', 'ಎಲ್ಲ್ಯ', 'ಎಂದ್ ಬಂದಯ್', 'ನೀ ಹೇಳುಡಾ', 'ಅಷ್ಟೈ ಹಂಗೇಳದು ಸರಿಯಾ, ನೀನೆ ಹ್ಯಾಳುಮತ್ತ', 'ಆ ಸೇಕರನ್ದು ಬರೀ ಮೆಡಗಾರ್ಕೆ ಮಾತುಕಯ್ಯ', 'ಅದ್ಯಾನ್ ಕೊಸ್ದಿಯ ಅಲ್ಲಿ?' ಇಂಥ ಮಾತುಗಳು ನನ್ನ ಕಿವಿಯನ್ನು ಚುರುಕುಗೊಳಿಸಿದವು. ಚಿರಪರಿಚಿತವಾದ 'ಗುಂಡ್ಲುಪೇಟೆ ಕಡೆ ಭಾಷೆ ಇದ್ದಂಗದೆ, ಎಲ್ಲೋ ನಮ್ಮ ಕಡೆಯವ್ರೆ ಇರ್ಬೇಕು' ಅಂದುಕೊಂಡು ನಾನು ಅವರತ್ತ ತಿರುಗಿ, 'ಎಲ್ಲಿಯವ್ರ?' ಅಂದೆ. ಅವರೆಲ್ಲ ಕ್ಷಣಕಾಲ ನನ್ನತ್ತ ನೋಟ ಹರಿಸಿದರು. ಆಮೇಲಾಪ್ಪೈಕಿ ಒಬ್ಬ, 'ನಾವು ಗುಂಡ್ಲುಪ್ಯಾಟೆ ಕಡೆಯವ್ರು' ಅಂದು, 'ನೀವೆಲ್ಲಿಯವ್ರ?' ಅಂತ ನನಗೊಂದು ಮರು ಪ್ರಶ್ನೆ ಹಾಕಿದ. 'ನಾನು ಆಕಡೆಯವ್ನೆಕಣೇಳಿ' ಅಂದು ಇಬ್ಬರೂ ಮಾತು ಮುಂದುವರಿಸಿದೆವು. ಉಳಿದವರೂ ಸೇರಿಕೊಂಡರು. ಊರು, ಜನ, ಭಾಷೆ, ಪರಿಚಯದವರು, ಪರಿಸರ ಹೀಗೆ ಕೆಲವೊಂದು ಸಂಗತಿಗಳ ಬಗ್ಗೆ ನಮ್ಮ ಮಾತುಕತೆ ಹೊರಳಿತು. ಗುಂಡ್ಲುಪೇಟೆಯ ಕನ್ನಡ ಮತ್ತು ಪ್ರಾದೇಶಿಕತೆ ನಮ್ಮೆಲ್ಲರನ್ನೂ ಹತ್ತಿರಕ್ಕೆ ತಂದಿತು. ಪರಿಚಯ ಒಡನಾಟಕ್ಕೆ ತಿರುಗಿ ಆತ್ಮೀಯವಾಗತೊಡಗಿತು. ಆತ್ಮೀಯತೆಯ ಪ್ರತೀಕವಾಗಿ ಅವರಲ್ಲೊಬ್ಬ, 'ಇದ್ಯಾಕ ನಿಂತೇ ಇದ್ದೀರಿ? ಬಣ್ಣಿ, ಕುಂತ್ಕೊಳ್ಳಿ' ಅಂದು, ಅಕ್ಕಪಕ್ಕ ಕುಂತವರಿಗೆ, 'ವಸಿ ಆಚೋರಿ ಈಚೋರಿ ಜರುಗಿ, ಹಿಂದುಮುಂದನಾಗಿ ಕುಂತ್ಕೊಂಡು ಸಾರ್ಗ ವಸಿ ಜಾಗ ಮಾಡ್ಕೊಡಿ ಮತ್ತ' ಅಂದು ಕುಂತಲ್ಲಿಯೇ ತಾನೂ ಕೊಂಚ ಚಿಗಿದ. ಅವನ ಮಾತನ್ನು ಉಳಿದವರು ಹಂಗೇ ಪಾಲಿಸಿದರು. ಪರಿಣಾಮ, ಕಿಕ್ಕಿರಿದು ತುಂಬಿದ್ದ ಕೊನೆ ಸೀಟನಲ್ಲಿ ನನಗೂ ಅಂಡೂರಲ್ಲೊಂದಿಷ್ಟು ಜಾಗ ಸಿಕ್ಕಿ, ಜೊತೆಗಾರರತ್ತ ತಿರುಗಿ, ಕಿರಿದಾಗಿ ಕೃತಜ್ಞತೆಯ ಹಲ್ಲು ಬೀರಿ, ಗಿಂಡಾಯನಮಃ ಅಂದುಕೊಂಡೆ. ಅಷ್ಟರಲ್ಲಿ ಬಸ್ಸು ಕುಶಾಲನಗರ ನಿಲ್ದಾಣದಿಂದ ಸುಮಾರು ಮೂರ್ನಾಲ್ಕು ಕಿಲೋಮೀಟರ್ ಮೈಸೂರಿನತ್ತ ಉರುಳಿತ್ತು. ಆಗಲಾಗ, ನನ್ನ ಸಾಲಿನಲ್ಲೇ ಕುಳಿತಿದ್ದ ಒಬ್ಬ ಜೊತೆಗಾರನಿಗೆ ಏನೋ ಜ್ಞಾನೋದಯವಾದಂತಾಗಿ ನನ್ನ ಮುಂದೊಂದು ಪ್ರಶ್ನೆ ಎಸೆದ– 'ನೀವು ಯಾತ್ರವ್ರ ಸಾ?' ಅಂತ. ನನಗೆ ಯಾರಾದರೂ 'ನೀವು ಯಾತರವ್ರ? ನಿನ್ನ ಜಾತಿ ಯಾವುದು?' ಅಂತ ಕೇಳಿದರೆ ನನ್ನ ಮುಂದೆ ಎರಡು ಅಭಿಪ್ರಾಯಗಳು ಮೂಡಿಬರುತ್ತವೆ. ಒಂದು–ಅದೊಂದು ಬ್ರಹ್ಮಾಂಡ ಪ್ರಶ್ನೆಯಂತಾಗುತ್ತದೆ. ಯಕ್ಷ ಮತ್ತು ಧರ್ಮರಾಯ ಇವರಿಬ್ಬರ ನಡುವೆ ನಡೆದ ಪ್ರಶ್ನೋತ್ತರ ಸಂಭಾಷಣೆಯಷ್ಟೇ ಪ್ರಮುಖವಾದುದು ಅಂತನ್ನಿಸುತ್ತದೆ. ಪ್ರಶ್ನೆ ಕೇಳಿದ ವ್ಯಕ್ತಿಗೆ ಏನೆಂದು ಹೇಳಬೇಕೆಂದು ತೋಚುವುದೇ ಇಲ್ಲ. ಬರೀ ಪ್ರಶ್ನೆ, ಬ್ರಹ್ಮಾಂಡದ ಮೂಲದಂತೆ. ಇನ್ನೊಂದು–ಎಲಾ, ಇವನೆಂಥ ಪರಮ ದಡ್ಡ? ಇವನೇನು ಮನುಷ್ಯನೊ? ಇಲ್ಲ ಮನುಷ್ಯ ಆಕಾರದಲ್ಲಿರುವ ಕ್ಷುದ್ರ ಜೀವಿಯೊ? ಅಂತ. ಆದರೆ, ಇವೆಲ್ಲ ತರ್ಕಕ್ಕೆ ಸರಿ. ಬಸ್ಸಿನಲ್ಲಿ ಕುಳ್ಳಿರಲು ನನಗೊಂದಿಷ್ಟು ತಾವು ಮಾಡಿಕೊಟ್ಟ ಜೊತೆಗಾರ ಹಾಕಿದ ಪ್ರಶ್ನೆಗೆ ಈ ನನ್ನ ತಾರ್ಕಿಕ ಸಂಗತಿಳಾವುವೂ ಬೇಕಿರುವುದಿಲ್ಲ, ತಾನೆ? ಹಾಗಾಗಿ, ನಾನು ಅವನ ಪ್ರಶ್ನೆಗೊಂದು ಉತ್ತರ ಹೇಳಲೇಬೇಕಾಯಿತು. ಇಂಥ ಸಮಸ್ಯೆಗಳು ಬಂದಾಗಲೆಲ್ಲ ನನ್ನ ಬಳಿ ಉತ್ತರ ಸದಾ ಸಿದ್ಧವಾಗಿರುತ್ತದೆ ಎಂಬುದು ನಿಮಗೆ ಮೊದಲಿನಿಂದಲೂ ಗೊತ್ತೇ ಇದೆಯಲ್ಲ? ಅದರಂತೆ ಹೇಳಿದೆ, 'ನಾನು ನಿಮ್ಮವನೆಕಯ್ಯಾ'